‘ಇಲ್ಲ. ನಾನು ಹೀಗೆಯೇ ಬರುತ್ತೇನೆ.’ ಎನ್ನುತ್ತಾ ಅವನು ಎದ್ದು ನಿಂತು ನನ್ನೆಡೆಗೆ ತಿರುಗಿ, ‘ದಯವಿಟ್ಟು ನೀವೂ ಬನ್ನಿ ಸಾರ್’ ಎಂದ.

‘ನಾನು ಖಂಡಿತಾ ಬರುತ್ತೇನೆ. ಆದರೆ ಇದನ್ನು ನಾನು ಕಿಂಚಿತ್ತೂ ಇಷ್ಟಪಡುವುದಿಲ್ಲ’ ಎಂದೆ.

‘ನೀನೂ ಬಾ’, ಹುಡುಗ, ಇಂಗ್ಲಿಷ್ ಹುಡುಗಿಯನ್ನೂ ಕರೆದ.

ನಾವು ಮುದುಕನ ಜೊತೆ ಹೂದೋಟವನ್ನು ದಾಟಿ ಹೋಟೆಲಿಗೆ ಪ್ರವೇಶಿಸಿದೆವು. ಮುದುಕ ತುಂಬಾ ಖುಷಿಯ ಮೂಡಿನಲ್ಲಿದ್ದ. ಅವನ ಹೆಜ್ಜೆಗಳಲ್ಲಿ ತಾರುಣ್ಯದ ಹುರುಪು ಕಾಣುತ್ತಿತ್ತು.

‘ನೀವು ಮೊದಲು ನನ್ನ ಕಾರನ್ನು ನೋಡಿ.’ ಎಂದು ಅವನು ನಮ್ಮನ್ನು ಕಾರು ಪಾರ್ಕಿಂಗ್‌ಗೆ ಕರೆದುಕೊಂಡು ಹೋದ. ‘ಅಗೋ, ಅಲ್ಲಿ ನಿಂತಿದೆಯಲ್ಲ... ಹಸಿರು ಬಣ್ಣದ ಕಾರು...’ ಅವನು ತೋರಿಸಿದ. ಹುಡುಗನ ಬಾಯಿಂದ ಅಪ್ರಯತ್ನಪೂರ್ವಕವಾಗಿ ಒಂದು ಶಿಳ್ಳೆ ಹೊರಟಿತು. ‘ವ್ಹಾಹ್, ವಾಟೇ ಬ್ಯೂಟಿ!’ ಅವನು ಉದ್ಗರಿಸಿದ.

‘ಈಗ ನನ್ನ ರೂಮಿಗೆ ಹೋಗುವ. ನಿನ್ನ ಲೈಟರ್ ಬಿಡದೇ ಹತ್ತು ಬಾರಿ ಉರಿದರೆ ಈ ಕಾರು ನಿನ್ನದು.’

ನಾವು ಅವನ ವಿಸ್ತಾರವಾದ ದೊಡ್ಡ ಬೆಡ್ರೂಮಿಗೆ ಹೋದೆವು. ಮಂಚದ ಮೇಲೆ ಹೆಂಗಸಿನ ಗೌನೊಂದು ಬಿದ್ದಿತ್ತಾದರೂ ಅಲ್ಲಿ ಹೆಂಗಸರಾರು ಕಾಣಿಸುತ್ತಿರಲಿಲ್ಲ.

‘ಎಲ್ಲಕ್ಕಿಂತ ಮೊದಲು ನಾವೊಂದು ಪೆಗ್ ಮಾರ್ಟಿನಿ ಕುಡಿಯುವ’ ಅವನೆಂದ. ರೂಮಿನ ಒಂದು ಮೂಲೆಯಲ್ಲಿ ಒಂದು ಸಣ್ಣ ಮೇಜಿನ ಮೇಲೆ ವಿವಿಧ ಡ್ರಿಂಕ್ಸ್‌ಗಳನ್ನು ಒಪ್ಪವಾಗಿ ಜೋಡಿಸಿಡಲಾಗಿತ್ತು. ಕಾಲಿಂಗ್ ಬೆಲ್ಲನ್ನು ಒತ್ತಿ ಅವನು ಡ್ರಿಂಕ್ಸ್ ತಯಾರಿಸಲು ಅಣಿಯಾದ. ಅಷ್ಟರಲ್ಲಿ ಬಾಗಿಲು ಬಡಿದ ಶಬ್ದವಾಯಿತು ಮತ್ತು ಒಬ್ಬಳು ಕಪ್ಪು ಹೆಂಗಸು ಒಳಬಂದಳು.

‘ಆಹ್!’ ಮುದುಕ ಉದ್ಗರಿಸಿದ. ಅವನು ಜಿನ್ ಬಾಟಲನ್ನು ಮೇಜಿನ ಮೇಲಿಟ್ಟು ಜೇಬಿಂದ ಒಂದು ಪೌಂಡ್ ನೋಟನ್ನು ಹೊರತೆಗೆದ. ಅದನ್ನು ಕಪ್ಪು ಹೆಂಗಸಿಗೆ ಕೊಡುತ್ತಾ, ‘ನಾವೊಂದು ಸಣ್ಣ ಆಟವಾಡಲು ನಿರ್ಧರಿಸಿದ್ದೇವೆ. ನನಗೆ ಮೂರು ವಸ್ತುಗಳು ಬೇಕು. ಒಂದು ಸುತ್ತಿಗೆ, ಕೆಲವು ಮೊಳೆ, ಮತ್ತೊಂದು ಮಾಂಸ ಕತ್ತರಿಸುವ ಕತ್ತಿ. ಈ ಹಣ ನಿನಗೆ’ ಎಂದ.

‘ಮಾಂಸ ಕಡಿಯುವ ಕತ್ತಿ?!’ ಹೆಂಗಸು ಹೌಹಾರಿದಳು.

‘ಹೌದು. ನಿನಗೆ ಹೋಟೆಲಿನ ಅಡುಗೆ ಮನೆಯಲ್ಲಿ ಅದರ ಪರಿಚಯ ಖಂಡಿತ ಇದ್ದೇ ಇರುತ್ತದೆ. ಪ್ಲೀಜ್’ ಎಂದ ಮುದುಕ.

‘ಆಯ್ತು ಸರ್, ಆಯ್ತು’ ಎನ್ನುತ್ತಾ ಹೆಂಗಸು ಹೊರಟು ಹೋದಳು.

ಮುದುಕ ನಮಗೆಲ್ಲಾ ಮಾರ್ಟಿನಿ ಹಂಚಿದ. ನನಗೆ ಏನೊಂದೂ ತೋಚಲಿಲ್ಲ. ಮುದುಕ ಹುಡುಗನ ಬೆರಳು ಕತ್ತರಿಸುವ ತವಕದಲ್ಲಿದ್ದ. ಒಂದು ವೇಳೆ ಹುಡುಗ ಗೆಲ್ಲದಿದ್ದಲ್ಲಿ ನಾವವನನ್ನು ಅವನು ಸೋತ ಕ್ಯಾಡಿಲಾಕ್ ಕಾರಿನಲ್ಲೇ ಆಸ್ಪತ್ರೆಗೆ ಕೊಂಡೊಯ್ಯಬೇಕಾಗುವುದಂತೂ ಖಾತ್ರಿ!

‘ಇದೊಂದು ಹುಚ್ಚು ಪಣವೆಂದು ನಿನಗನಿಸುತ್ತಿಲ್ಲವೇ?’ ನಾನು ಹುಡುಗನಿಗೆ ಕೇಳಿದೆ.

‘ಇದೊಂದು ತುಂಬಾ ಬ್ಯೂಟಿಫುಲ್ ಪಣ!’ ಹುಡುಗ ಬಹಳ ಖುಷಿಯಿಂದ ಹೇಳಿದ. ಈಗಾಗಲೇ ಒಂದು ಲಾರ್ಜ್ ಮಾರ್ಟಿನಿ ಅವನ ಹೊಟ್ಟೆಯನ್ನು ಸೇರಿತ್ತು.

‘ಖಂಡಿತವಾಗಿಯೂ ಇದೊಂದು ಕ್ರೇಜಿ ಪಣ!’ ಹುಡುಗಿ ಹೇಳಿದಳು. ‘ಸೋತರೆ ಏನೆಂದು ಗೊತ್ತು ತಾನೆ?’

‘ಓಹ್, ನನಗೆ ಗೊತ್ತು. ನಿಜ ಹೇಳಬೇಕೆಂದರೆ ನನಗೆ ಈವರೆಗೂ ಎಡಗೈಯ ಕಿರುಬೆರಳಿನ